**ದಿನಾಂಕಃ 25.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನ್ನ ತಂದೆಯ ಹೆಸರು ಕರಿಗೌಡ ಎಂದರೆ ಸರಿ. ನನ್ನ ತಾತನ ಹೆಸರು ಸೊಳ್ಳೆಪುಟ್ಟೇಗೌಡ ಎಂದರೆ ಸರಿ. ದಾವಾ ಸ್ವತ್ತು ನನ್ನ ತಾತ ಅಥವಾ ತಂದೆ ಹೆಸರಿನಲ್ಲಿ ಇತ್ತಾ ಎಂದರೆ ಸಾಕ್ಷಿಯು ಇರಲಿಲ್ಲ ಅದು ನನ್ನ ತಾತನವರ ಹೆಸರಿನಲ್ಲಿದ್ದಾಗ ಪಡ ಬಿದ್ದಿರುತ್ತದೆಂದು ನುಡಿಯುತ್ತಾರೆ. 2000-2001 ರಲ್ಲಿ ಪಡ ರೆಸ್ಟೋರ್ ಆಗಿದೆ ಎಂದರೆ ಸರಿ. 1ನೇ ವಾದಿಯ ಯಜಮಾನರ ಹೆಸರು ರಾಮು ಎಂದರೆ ಸರಿ. 1ನೇ ವಾದಿಯ ಮಾವನ ಹೆಸರು ಕೆಂಪೀರೇಗೌಡ ಬಿನ್ ದೊಡ್ಡನಿಂಗೇಗೌಡ ಎಂದರೆ ನನಗೆ ಗೊತ್ತಿಲ್ಲ. ಪಡ ರೆಸ್ಟೋರ್ ಆದ ಬಗ್ಗೆ ನಾನು ನಿಡಿ-13 ನ್ನು ಹಾಜರು ಪಡಿಸಿರುತ್ತೇನೆಂದರೆ ಸರಿ. ಸದರಿ ನಿಡಿ-13 ರ 5ನೇ ಪುಟದ 4ನೇ ಪ್ಯಾರಾ 6ನೇ ಸಾಲಿನಲ್ಲಿ ಸರ್ವೆ ನಂ.111/2 ರ ಮೂಲ ಖಾತೆದಾರ ದೊಡ್ಡನಿಂಗ ಬಿನ್ ಕೆಂಪೀರ ಅಂದರೆ ಇವರುಗಳು ವಾದಿಯ ಪೂರ್ವಜರು ಎಂದರೆ ಸರಿಯಲ್ಲ. ಅದು ಪುಟ್ಟೇಗೌಡರ ಹೆಸರಿನಲ್ಲಿತ್ತು ಎಂದು ನುಡಿಯುತ್ತಾರೆ.

2. 1ನೇ ವಾದಿ ಪಡ ರೆಸ್ಟೋರ್ ಸಂಬಂಧ ಅರ್ಜಿ ಕೊಟ್ಟಿರುವ ಬಗ್ಗೆ ನನಗೆ ಮಾಹಿತಿ ಇರುತ್ತದೆಂದರೆ ಸರಿಯಲ್ಲ. ಅದರಂತೆ ದಾವಾ ಸ್ವತ್ತನ್ನು ಪರಿಶೀಲನೆ ಮಾಡಿ ಮಹಜರ್ ಮಾಡಿ 1ನೇ ವಾದಿಯೇ ದಾವಾ ಸ್ವತ್ತಿನ ಸ್ವಾಧೀನದಲ್ಲಿರುವುದಾಗಿ ವರದಿ ಕೊಟ್ಟಿರುತ್ತಾರೆಂದರೆ ಸರಿಯಲ್ಲ. ನಿಪಿ-12 ರಂತೆ ಸ್ವಾಧೀನವು 1ನೇ ವಾದಿಯ ಹೆಸರಿನಲ್ಲಿರುತ್ತದೆಂದರೆ ಸರಿಯಲ್ಲ. ಸಾಕ್ಷಿಯು ನಾವೇ ಸ್ವಾಧೀನದಲ್ಲಿರುತ್ತೇವೆಂದರೆ ಸರಿಯಲ್ಲ. ದಾವಾ ಸ್ವತ್ತಿನ ಸಂಬಂಧ ನನಗೆ ಯಾವುದೇ ಹಕ್ಕು ಇಲ್ಲದೇ ಇದ್ದರೂ ಸಹಿತ ನಾನು ಪಡ ರೆಸ್ಟೋರ್ ಸಂಬಂಧ ಅರ್ಜಿ ಸಲ್ಲಿಸಿದ್ದೇನು ಎಂದರೆ ಸಾಕ್ಷಿಯು ನನ್ನ ತಾತನ ಹೆಸರಿನಲ್ಲಿದ್ದ ಕಾರಣ ಅರ್ಜಿ ಸಲ್ಲಿಸಿದ್ದೇನು ಎಂದು ನುಡಿಯುತ್ತಾರೆ. 1ನೇ ವಾದಿಯು ಅರ್ಜಿ ಸಲ್ಲಿಸಿದ್ದು ನಾನು ಕೂಡ ಅರ್ಜಿ ಸಲ್ಲಿಸಿದ ಮೇಲೆ ಸಂಬಂಧಪಟ್ಟ ಅಧಿಕಾರಿಯವರು ಮಹಜರ್ ಮಾಡಿ ಸದರಿ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಇಲ್ಲವೆಂದು ಅದು 1ನೇ ವಾದಿಗೆ ಸೇರುತ್ತದೆಂದು ವರದಿ

ಕೊಟ್ಟಿರುತ್ತಾರೆಂದರೆ ಸರಿಯಲ್ಲ. ಸದರಿ ದೊಡ್ಡಆಲಹ ಳ್ಳಿ ಗ್ರಾಮದಲ್ಲಿ ನಮಗೆ ಸಂಬಂಧಿಸಿದ ಆಸ್ತಿಗಳಿವೆ ಎಂದರೆ ಸರಿ . ಅವುಗಳು ಸಹ ಪಡ ಬಿದ್ದಿತ್ತು ಎಂದರೆ ಸಾಕ್ಷಿಯು ಹೌದು ಅದು ಸರ್ವೆ ನಂ.106/3 ನನ್ನ ತಾತನ ಹೆಸರಿನಲ್ಲಿತ್ತು ಎಂದು ನುಡಿಯುತ್ತಾರೆ.

3. ದಾವಾ ಆಸ್ತಿ ಹಾಗೂ ಸರ್ವೆ ನಂ.106/3 ಇವುಗಳನ್ನು ಪಡ ರೆಸ್ಟೋರೇಷನ್ ಆದೇಶ ಸಂಖ್ಯೆ ಡಿಸಿಬಿ/ಸಿ.ಆರ್ /3-2000-2001 ಎಂಬುದರಲ್ಲಿ ಮೂಲ ವಂಶಸ್ಥರಿಗೆ ಆದೇಶವಾಗಿರುತ್ತದೆಂದರೆ ಸರಿ. ಸಾಕ್ಷಿಯು ಮುಂದುವರಿದು ನನ್ನ ಚಿಕ್ಕಪ್ಪಂದಿರಿಗೆ ಆಗಿರುತ್ತದೆಂದು ನುಡಿಯುತ್ತಾರೆ. ಸದರಿ ಆದೇಶದ ಅನ್ವಯ 1ನೇ ವಾದಿಯ ಹೆಸರಿಗೆ ಎಂ ಆರ್ ಸಂಖ್ಯೆ 1/2001-02 ಎಂಬಂತೆ ಖಾತೆಯಾಗಿರುತ್ತದೆಂದರೆ ಸರಿಯಲ್ಲ. ಅದರಂತೆ 2014 ನೇ ಇಸವಿಯವರೆಗೂ 1ನೇ ವಾದಿಯ ಹೆಸರಿನಲ್ಲಿ ದಾವಾ ಸ್ವತ್ತಿನ ಖಾತೆ ಬಂದಿರುತ್ತದೆಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರಿದು ಖಾತೆ ಆಗಿದ್ದರೂ ಅದನ್ನು ಕೋರ್ಟು ವಜಾ ಮಾಡಿರುತ್ತದೆಂದು ನುಡಿಯುತ್ತಾರೆ. ಈ ಸಂಬಂಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

4. ನಿಪಿ-2 ರಂತೆ ಖಾತೆ ಪಹಣಿ 1ನೇ ವಾದಿಯ ಹೆಸರಿನಲ್ಲಿ ಬಂದಿರುತ್ತದೆಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1ನೇ ವಾದಿಯ ಸ್ವಾಧೀನಕ್ಕೆ ನಾನು ತೊಂದರೆ ಕೊಟ್ಟ ಕಾರಣ 2004ನೇ ಇಸವಿಯಲ್ಲಿ 1ನೇ ವಾದಿಯು ನನ್ನ ವಿರುದ್ದ ಓ ಎಸ್ 83/2004 ಎಂಬುದಾಗಿ ದಾವೆ ಹಾಕಿದ್ದರು ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನಾನು ಪ್ರತಿವಾದಿಯಾಗಿದ್ದು ನನ್ನ ತಕರಾರು ಸಲ್ಲಿಸಿರುತ್ತೇನೆಂದರೆ ಸರಿ. ವಾದಿಯ ಆರೋಗ್ಯ ಸರಿಯಿಲ್ಲದ ಕಾರಣ ಅವರು ನ್ಯಾಯಾಲಯಕ್ಕೆ ಹಾಜರಾಗದ ಕಾರಣ ದಾವೆ ವಜಾವಾಗಿರುತ್ತದೆಂದರೆ ಸರಿಯಲ್ಲ. ಸಾಕ್ಷಿ ಅವರು ಹಾಜರಾಗುತ್ತಿದ್ದರು ಎಂದು ನುಡಿಯುತ್ತಾರೆ. ಸದರಿ ದಾವೆ ವಜಾ ಆದ ಮೇರೆಗೆ ನಾನು ಅದರ ಆದೇಶದ ಮೇರೆಗೆ ಖಾತೆ ಬದಲಾವಣೆಗೆ ಅರ್ಜಿ ಸಲ್ಲಿಸಿದ್ದೇನು ಎಂದರೆ ಸಾಕ್ಷಿಯು ಸದರಿ ದಾವೆಯಲ್ಲಿ ವಾದಿ ಬರುತ್ತಿದ್ದರು ನಂತರ ವಾದಿಯ ಪರ ಅವರ ಮಗ ವಿಚಾರಣೆಗೆ ಬರುತ್ತಿದ್ದರು ಎಂದು ನುಡಿಯುತ್ತಾರೆ.

5. ನಾನು 2015-16 ರಲ್ಲಿ ನಿಡಿ-3 ರಂತೆ ಎಂ ಆರ್ ಹೆಚ್ 79/2015-16 ರಂತೆ ನನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದೇನೆಂದರೆ ಸರಿ. ನಿಪಿ-10 ರಂತೆ ಸಿವಿಲ್ ಕೋರ್ಟ್ ಆದೇಶದ ಮೇರೆಗೆ ನನ್ನ ಹೆಸರಿನಲ್ಲಿ ಖಾತೆ ಮಾಡಿಸಿಕೊಡುವುದಾಗಿ ಷರಾ ಬರೆದಿರುತ್ತಾರೆಂದರೆ ಸರಿ. ಸದರಿ ಆದೇಶದಲ್ಲಿ ನನಗೆ ಖಾತೆ ಮಾಡುವಂತೆ ಯಾವುದೇ ನಿರ್ದೇಶವಾಗಿಲ್ಲ ಅದು ಎಸಿ ನ್ಯಾಯಾಲಯದಲ್ಲಿ ಆಗಿರುತ್ತದೆಂದು ನುಡಿಯುತ್ತಾರೆ. ನಾನು ರೆವಿನ್ಯೂ ಅಧಿಕಾರಿಗಳ ಮುಂದೆ ದಾವೆಯ ಸಂಬಂಧ ಸುಳ್ಳು ಹೇಳಿಕೆ ನೀಡಿ ನನಗೆ ಯಾವುದೇ ಮಾಲೀಕತ್ವ ಇಲ್ಲದೇ ಇದ್ದರೂ ಸಹಿತ ಖಾತೆಯನ್ನು ನನ್ನ ಹೆಸರಿಗೆ ಮಾಡಿಸಿಕೊಂಡಿರುತ್ತೇನೆಂದರೆ ಸುಳ್ಳು. ಎಸಿ ನ್ಯಾಯಾಲಯದಲ್ಲಿ ಆದ ಆದೇಶದ ಮೇರೆಗೆ 1ನೇ ವಾದಿಯು ಮೇಲ್ಮನವಿ ಸಲ್ಲಿಸಿರುತ್ತಾರೆಂದರೆ ಸರಿ. ಡಿಸಿ ನ್ಯಾಯಾಲಯದಲ್ಲಿ ಇದನ್ನು ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಬೇಕೆಂದು ಸೂಚಿಸಿರುತ್ತಾರೆಂದರೆ ಸರಿಯಲ್ಲ. ಆದ್ದರಿಂದ 1ನೇ ವಾದಿಯು ಪ್ರಸ್ತುತ ದಾವೆ ಹಾಕಿರುತ್ತಾರೆಂದರೆ ನನಗೆ ಗೊತ್ತಿಲ್ಲ.

6. ದಾವಾ ಸ್ವತ್ತಿನಲ್ಲಿ 2012-13 ರಲ್ಲಿ 1ನೇ ವಾದಿ ಅವರ ಕುಟುಂಬದವರು ಬೋರ್ ವೆಲ್ ಹಾಕಿಸಿರುತ್ತಾರೆಂದರೆ ಸಾಕ್ಷಿಯು ಅದು ನನ್ನ ಚಿಕ್ಕಪ್ಪ ಮತ್ತು ನಾನು ಹಾಕಿಸಿರುತ್ತೇವೆಂದು ನುಡಿಯುತ್ತಾರೆ. 1ನೇ ವಾದಿಯ ಕುಟುಂಬದವರು ಬೋರ್ ವೆಲ್ ಹಾಕಿಸುವ ಸಂಬಂಧ ಖರೀದಿಸಿದ ದಾಖಲಾತಿಗಳನ್ನು ನಿಪಿ-17 ರಿಂದ ನಿಪಿ-19 ರಂತೆ ಸಲ್ಲಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಶಿವನಂದಿ ಬೋರ್ ವೆಲ್ ಇವರು ಈ ಸಂಬಂಧ 1ನೇ ವಾದಿಗೆ ಹೀಲ್ಡ್ ಸರ್ಟಿಫಿಕೇಟ್ ನೀಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. 1ನೇ ವಾದಿ ಹಾಗೂ ಅವರ ಕುಟುಬಂದವರು ದಾವಾ ಸ್ವತ್ತಿನಲ್ಲಿ ರೇಷ್ಮೆ ಬೆಳೆ ಬೆಳೆಯುತ್ತಾ ಜೀವನ ಸಾಗಿಸುತ್ತಿದ್ದಾರೆಂದರೆ ಸರಿಯಲ್ಲ. 1ನೇ ವಾದಿಯು ನಿಪಿ-20 ರಂತೆ ಈ ಸಂಬಂಧ ದೃಢೀಕರಣ ಪತ್ರವನ್ನು ಕೂಡ ಹಾಜರು ಪಡಿಸಿದ್ದಾರೆಂದರೆ ನನಗೆ ಗೊತ್ತಿಲ್ಲ. ಈ ವಿಚಾರವಾಗಿ 1ನೇ ವಾದಿಯು ನಿಪಿ-21 ರಿಂದ 25 ರಂತೆ ಪೊಟೋಗಳನ್ನು ಸಹ ಹಾಜರು ಪಡಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಪ್ರಸ್ತುತವರೆಗೂ ವಾದಿಗಳೇ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇದ್ದಾರೆಂದರೆ ಸಾಕ್ಷಿಯು ಸುಮಾರು 54 ವರ್ಷಗಳಿಂದ ನಾವೇ

ಸ್ವಾಧೀನದಲ್ಲಿದ್ದೇವೆಂದು ನುಡಿಯುತ್ತಾರೆ. ನನ್ನ ಅಥವಾ ನನ್ನ ತಂದೆಯ ಹೆಸರಿನಲ್ಲಿ ಆಗಲೀ ಅಥವಾ ನನ್ನ ತಾತನ ಹೆಸರಿಲ್ಲಿ ಆಗಲೀ ದಾವಾ ಆಸ್ತಿಯು ಪಡ ರೆಸ್ಟೋರ್ ಆಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ನನ್ನ ತಾತನ ಹೆಸರಿನಲ್ಲಿತ್ತು ಎಂದು ನುಡಿಯುತ್ತಾರೆ. ನಾನು ಖಾತಾ ಬದಲಾವಣೆಯನ್ನು ಅಕ್ರಮವಾಗಿ ಪಡೆದಿರುತ್ತೇನೆಂದರೆ ಸರಿಯಲ್ಲ. ನಾನು ಸ್ವಾಧೀನದಲ್ಲಿ ಇಲ್ಲದೇ ಇದ್ದರೂ ಸಹಿತ ಈ ಸಂಬಂಧ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಈ ಹಂತದಲ್ಲಿ ಒಂದು ಕೊನೆಯ ಅವಕಾಶಕ್ಕಾಗಿ ಮುಂದುವರಿದ ವಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ನ್ಯಾಯದ ಹಿತದೃಷ್ಟಿಯಿಂದ ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

**ಅಪರ ಸಿಜೆ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**